

## ನಂಬಿ, ಇದು ಒಂಟೆ!

ಸೃಷ್ಟಿಯೊಂದು ನಾವು ನೋಡುವ ದೃಷ್ಟಿಯ ಅನುಸಾರವಾಗಿ ವಿಭಿನ್ನವಾಗಿ ಕಾಣುತ್ತದೆ. ಈ ಚಿತ್ರದಲ್ಲಿರುವ ಪ್ರಾಣಿ ಒಂಟೆ. ಆದರೆ, ತಕ್ಷಣಕ್ಕೆ ನೋಡಿದರೆ ಇದು ಯಾವುದಪ್ಪಾ ಹೊಸ ಪ್ರಾಣಿ ಎಂಬಂತೆ ಕಾಣುತ್ತದೆ. ಇಲ್ಲಿಯವರೆಗೆ ನೋಡಿರದ ಯಾವುದೋ ಒಂದು ವಿಚಿತ್ರ ಜೀವಿಯಂತೆ ಕಾಣುತ್ತದೆ. ಇದು ಈ ರೀತಿ ಕಾಣಲು ಕಾರಣ ಕ್ಯಾಮೆರಾವನ್ನು ಅದರ ಮುಖಕ್ಕೆ ಹತ್ತಿರವಾಗಿ ಇಟ್ಟು ಕ್ಲಿಕ್ಕಿಸಿರುವುದು. ಹೀಗಾಗಿಯೇ ಒಂಟೆಯೊಂದು ಗುರುತಿಸಲಾರದಷ್ಟು ವಿಚಿತ್ರವಾಗಿ ಫೋಟೊದಲ್ಲಿ ಮೂಡಿಬಂದಿದೆ. ಇದು ನಿಜವಾಗಿಯೂ ಒಂಟೆಯೇನಾ ಎಂಬ ಅನುಮಾನವೂ ಮೂಡಿಸುತ್ತದೆ. ಇಂತಹ ಚಿತ್ರ ಮೂಡಿಬಂದದ್ದು ರಾಜಸ್ತಾನದ ಪುಶ್ಕಾರಿನಲ್ಲಿ.

—ಮೇಘಾ ಆರ್. ಸನಾಡಿ, ಪುತ್ತೂರು



## ಮಾಲ್ ಝಲಕ್ !

ನೋಡಲು ಕಣ್ಣಿಗೆ ಹಬ್ಬವಾಗುವ ಹಾಗೇ ಹಸಿರಿನ ಮಾಲೆ, ಒಮ್ಮೆ ನೋಡಿದರೆ ನೋಡುತ್ತಲೇ ಇರಬೇಕು ಎಂದೆನಿಸುವ ಈ ವಿಶಿಷ್ಟ ಮಾಲ್ ಕಣ್ಣಿಗೆ ಕಂಡದ್ದು ಹುಬ್ಬಳ್ಳಿಯಲ್ಲಿ. ಸಾಮಾನ್ಯವಾಗಿ ಜನರನ್ನು ಆಕರ್ಷಿಸಲೆಂದೇ ದೊಡ್ಡ ದೊಡ್ಡ ಮಾಲ್‌ಗಳಲ್ಲಿ, ಹೈಟೆಕ್ ಸಿಟಿಗಳಲ್ಲಿ ಕಲರ್ ಲೈಟ್ ತೂಗು ಬಿಡುವುದನ್ನು ನಾವು ಕಂಡಿದ್ದೇವೆ. ಆದರೆ ಇಲ್ಲಿ ಕಂಡದ್ದು ವಿಚಿತ್ರವೆನಿಸಿದರೂ ಸತ್ಯ.

ಮಾಲ್‌ನ ಸುತ್ತಲೂ ಕೇವಲ ಗಿಡದ ಬಳ್ಳಿಗಳನ್ನು ಮಾಲೆಯನ್ನಾಗಿ ತೂಗು ಬಿಟ್ಟದ್ದು ವಿಶೇಷ. ಕೇವಲ ನೋಡಲು ಆಕರ್ಷಣೆ ಮಾತ್ರವಲ್ಲ ಇದೊಂದು ನಮಗೆ ಪರಿಸರ ಜಾಗೃತಿ ಕುರಿತು ಮಹತ್ವದ ತಿಳುವಳಿಕೆ ಪಾಠವೂ ಕೂಡ ಅಂದೆನಿಸಿತು. ಗಿಡವನ್ನು ಬೆಳೆಸಲು ಇಂಥದ್ದೇ ಜಾಗ ಬೇಕೆಂದಿಲ್ಲ ಈ ತರಹವೂ ಕೂಡ ಹಸಿರನ್ನು ಪ್ರೀತಿಸಬಹುದೆಂದು ಮನವರಿಕೆ ಆಗಿದ್ದು ಈ ದೃಶ್ಯ ಕಂಡದ್ದು.

—ಯಶಸ್ವಿ ದೇವಾಡಿಗ, ವಿಜಯಪುರ



## ನಿರ್ಜೀವಕ್ಕೆ ಕಲೆಯ ಜೀವ

ಹಳೆಕಾಲದ ತೊಟ್ಟಿಮನೆಯಲ್ಲಿನ ಮುರಿದು ಹೋದ ಮರದ ಕಂಬವೊಂದಕ್ಕೆ ಕಲಾಕಾರನು ತನ್ನ ಕಲಾ ಸೂಕ್ಷ್ಮತೆಯಿಂದ ಜೀವ ನೀಡಿದ್ದಾನೆ.

ಆ ಮರದ ಕಂಬಕ್ಕೆ ಹೆಣ್ಣು ಮುಖದ ಆಕೃತಿಯನ್ನು ಜೋಡಣೆ ಮಾಡಿ, ಅದರ ಜೊತೆ ಜೊತೆಗೆ ಗಣೇಶನ ಮುಖದ ಆಕೃತಿ, ಹಂಸಪಕ್ಷಿಯ ಕಲಾಕೃತಿ ಅಳವಡಿಸಿ ಸುಂದರವಾಗಿ ಕಾಣುವಂತೆ ಮಾಡಿದ್ದಾರೆ. ಅದರ ಚೆಲುವಿಗೊಂದು ಮರದ ಗಂಟೆಯನ್ನು ನೇತುಹಾಕಿ ನಡುಮನೆಗೊಂದು ಅಲಂಕಾರಿಕ ವಸ್ತುವಿನ ಮೆರುಗು ನೀಡಿದ್ದಾರೆ. ಶೃಂಗೇರಿಯ ಸಮೀಪದ ಕೆರೆಮನೆ ಹೋಂಸ್ಟೇನಲ್ಲಿದ್ದ ಅಪರೂಪದ ಕಲಾಜೋಡಣೆ ಇದು.

—ಎಸ್.ಪ್ರಭಾವತಿ, ಬೆಂಗಳೂರು